ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು- 560001

ಸಂಖ್ಯೆ:ಸಿ7[2] ಪ್ರಾಶಿಅ/ಹೊ.ಶಾ.ನೋಂ.22/2018-19 ದಿನಾಂಕ:06-5-2019

## ಸುತ್ತೋಲೆ

ವಿಷಯ: 2019-20 ನೇ ಸಾಲಿನಲ್ಲಿ ಹೊಸದಾಗಿ ಶಾಶ್ವತ ಅನುದಾನರಹಿತ ಪೂರ್ವ ಪ್ರಾಥಮಿಕ/ಪ್ರಾಥಮಿಕ/ಪ್ರೌಢಶಾಲೆಗಳನ್ನು ಪ್ರಾರಂಭಿಸಲು ನೋಂದಣಿ ನೀಡುವ ಕುರಿತು ನೋಂದಾಯಿತ ಅರ್ಹ ಸಂಸ್ಥೆಗಳಿಂದ ಅರ್ಜಿಗಳನ್ನು ಆಹ್ವಾನಿಸುವ ಬಗ್ಗೆ.

ಉಲ್ಲೇಖ: 1] ಕರ್ನಾಟಕ ಶಿಕ್ಷಣ ಕಾಯ್ದೆ - 1983 ಸೆಕ್ಷನ್ 30 ಮತ್ತು 31.32

2] ಕರ್ನಾಟಕ ಶಿಕ್ಷಣ ಸಂಸ್ಥೆಗಳು[ವರ್ಗೀಕರಣ ಮತ್ತು ನೋಂದಣಿ]ನಿಯಮಗಳು-1997

3] ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆ - 2009

4] Karnataka Educational Institutions [classification, Regulation and Prescription of Curricula etc] [Amendment] Rules.2018

5] Karnataka Educational Institutions [classification & Registration] [Amendment] Rules.2018

6] ಸರ್ಕಾರದ ಆದೇಶ ಸಂಖ್ಯೆ:ಇಡಿ.205.ಪಿಜಿಸಿ.2017, ದಿನಾಂಕ:21-8-2017

7] ಸರ್ಕಾರದ ಆದೇಶ ಸಂಖ್ಯೆ:ಇಡಿ.587.ಪಿಜಿಸಿ.2018, ದಿನಾಂಕ:19-11-2018

8] ಈ ಕಛೇರಿ ಸಮಪತ್ರದ ದಿನಾಂಕ:29-1-2019 ಮತ್ತು ದಿನಾಂಕ:13-3-2019

*******

2019-20ನೇ ಶೈಕ್ಷಣಿಕ ಸಾಲಿನಲ್ಲಿ ಖಾಸಗಿ ಅನುದಾನರಹಿತ ಪೂರ್ವ ಪ್ರಾಥಮಿಕ/ಪ್ರಾಥಮಿಕ ಕಿರಿಯ, ಹಿರಿಯ ಹಾಗೂ ಪ್ರೌಢ ಶಾಲೆಗಳನ್ನು ಪ್ರಾರಂಭಿಸಲು ಇಚ್ಛಿಸುವ ಆಡಳಿತ ಮಂಡಳಿಗಳು ವಿವಿಧ ಸರ್ಕಾರಿ ಆದೇಶ ಹಾಗೂ ಇಲಾಖೆಯ ಸುತ್ತೋಲೆಗಳಲ್ಲಿನ ನಿಬಂಧನೆಗಳಂತೆ ಆನ್ ಲೈನ್ ಮುಖಾಂತರ ಅರ್ಜಿಗಳನ್ನು ಸಲ್ಲಿಸಿರುತ್ತಾರೆ.

2019-20ನೇ ಸಾಲಿನಲ್ಲಿ ಖಾಸಗಿ ಅನುದಾನ ರಹಿತ ಪೂರ್ವ ಪ್ರಾಥಮಿಕ, ಪ್ರಾಥಮಿಕ, ಪ್ರೌಢ ಶಾಲೆಗಳನ್ನು ಪ್ರಾರಂಭಿಸಲು ನೋಂದಣಿ ನೀಡುವ ಸಂಬಂಧ ಸಲ್ಲಿಕೆಯಾದ ಪ್ರಸ್ತಾವನೆಗಳನ್ನು ಉಲ್ಲೇಖ-4 ಮತ್ತು 5ರ ಸರ್ಕಾರದ ಅಧಿಸೂಚನೆಯಂತೆ ಪರಿಶೀಲಿಸಿ ಅರ್ಹ ಪ್ರಸ್ತಾವನೆಗಳಿಗೆ ಅನುಮತಿ ನೀಡುವ ಬಗ್ಗೆ ಸೂಕ್ತ ಕ್ರಮವಹಿಸಲು ಈಗಾಗಲೇ ಉಲ್ಲೇಖ-8ರ ಈ ಕಛೇರಿಯ ಸುತ್ತೋಲೆಯಲ್ಲಿ ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಮತ್ತು ಉಪನಿರ್ದೇಶಕರಿಗೆ ಸೂಚನೆ ನೀಡಲಾಗಿದೆ.

ಪ್ರಸ್ತುತ ಲೋಕಸಭಾ ಚುನಾವಣಾ ನೀತಿ ಸಂಹಿತೆ ಇರುವುದರಿಂದ ಹೊಸ ಶಾಲೆಗಳ ನೋಂದಣಿ ನೀಡುವ ಪ್ರಕ್ರಿಯೆಯು ಸ್ಥಗಿತಗೊಂಡಿದ್ದ ಹಿನ್ನೆಲೆಯಲ್ಲಿ ಚುನಾವಣಾ ನೀತಿ ಸಂಹಿತೆ ಮುಗಿದ ನಂತರ 2019-20ನೇ ಸಾಲಿನಲ್ಲಿ ಖಾಸಗಿ ಅನುದಾನ ರಹಿತ ಪೂರ್ವ ಪ್ರಾಥಮಿಕ, ಪ್ರಾಥಮಿಕ, ಪ್ರೌಢ ಶಾಲೆಗಳನ್ನು ಪ್ರಾರಂಭಿಸಲು ನೋಂದಣಿ ನೀಡುವ ಬಗ್ಗೆ ಪ್ರಕ್ರಿಯೆಯನ್ನು ಕೈಗೊಳ್ಳುವ ಸಂಬಂಧ ಪರಿಷ್ಕೃತ ವೇಳಾಪಟ್ಟಿಯನ್ನು ನಿಗಧಿಪಡಿಸಲಾಗಿದೆ.

**ಹೊಸ ಶಾಲೆಗಳ ನೋಂದಣಿಗೆ ನಿಗಧಿಪಡಿಸಲಾದ ಪರಿಷ್ಕೃತ ವೇಳಾಪಟ್ಟಿ**

2019-20 ನೇ ಸಾಲಿಗೆ 1 ರಿಂದ 8 ನೇ ತರಗತಿ ಹೊಸ ಶಾಲೆಗಳಿಗೆ ನೋಂದಣಿ ನೀಡುವ ಸಂಬಂಧ ಅನುಸರಿಸಬೇಕಾದ ವೇಳಾಪಟ್ಟಿ

| ಕ್ರ.ಸಂ. | ವಿಷಯ | ನಿಗಧಿಪಡಿಸಿದ ದಿನಾಂಕ |
|---|---|---|
| 1 | ಕ್ಷೇತ್ರ ಶಿಕ್ಷಣಾಧಿಕಾರಿಗಳು ಜಿಲ್ಲಾ ಉಪನಿರ್ದೇಶಕರಿಗೆ ಪ್ರಸ್ತಾವನೆಯನ್ನು ಆನ್‌ಲೈನ್ ತಂತ್ರಾಂಶದಲ್ಲಿ ಸಲ್ಲಿಸಲು ಕಡೆಯ ದಿನಾಂಕ | 16-5-2019 |
| 2 | ಉಪನಿರ್ದೇಶಕರು ಹೊಸ ಶಾಲೆಗಳ ನೋಂದಣಿ ಪ್ರಸ್ತಾವನೆಗಳನ್ನು ಆನ್‌ಲೈನ್ ತಂತ್ರಾಂಶದಲ್ಲಿ ಪ್ರಚಲಿತ ನಿಯಮಗಳಂತೆ ಇತ್ಯರ್ಥಪಡಿಸಿ ಮಂಜೂರಾತಿ ಹಾಗೂ ತಿರಸ್ಕೃತ ಆದೇಶ ಹೊರಡಿಸಲು ಕಡೆಯ ದಿನಾಂಕ | 28-5-2019 |

2019-20 ನೇ ಸಾಲಿಗೆ ಹೊಸದಾಗಿ (ಪ್ರತ್ಯೇಕವಾಗಿ) ಪ್ರೌಢಶಾಲೆಗಳಿಗೆ (9 ಮತ್ತು 10ನೇ ತರಗತಿಗಳಿಗೆ ಅಥವಾ 1 ರಿಂದ 10ನೇ ತರಗತಿಗಳ ವರೆಗೆ ಅಥವಾ ಪೂರ್ವ ಪ್ರಾಥಮಿಕ ತರಗತಿಗಳಿಂದ 10ನೇ ತರಗತಿಗಳಿಗೆ ನೋಂದಣಿ ನೀಡುವ ಸಂಬಂಧ ಅನುಸರಿಸಬೇಕಾದ ವೇಳಾಪಟ್ಟಿ

| ಕ್ರ.ಸಂ. | ವಿಷಯ | ನಿಗಧಿಪಡಿಸಿದ ದಿನಾಂಕ |
|---|---|---|
| 1 | ಕ್ಷೇತ್ರ ಶಿಕ್ಷಣಾಧಿಕಾರಿಗಳು ಜಿಲ್ಲಾ ಉಪನಿರ್ದೇಶಕರಿಗೆ ಪ್ರಸ್ತಾವನೆಯನ್ನು ಆನ್‌ಲೈನ್ ತಂತ್ರಾಂಶದಲ್ಲಿ ಸಲ್ಲಿಸಲು ಕಡೆಯ ದಿನಾಂಕ | 16-5-2019 |
| 2 | ಉಪನಿರ್ದೇಶಕರು ಸಂಬಂಧಿಸಿದ ಆಯುಕ್ತಾಲಯಕ್ಕೆ ಪ್ರಸ್ತಾವನೆಯನ್ನು ಆನ್‌ಲೈನ್ ತಂತ್ರಾಂಶದಲ್ಲಿ ಸಲ್ಲಿಸಲು ಕಡೆಯ ದಿನಾಂಕ | 28-5-2019 |
| 3 | ಸಂಬಂಧಿಸಿದ ಆಯುಕ್ತಾಲಯಗಳಲ್ಲಿ ಹೊಸ ಶಾಲೆಗಳ ನೋಂದಣಿ ಪ್ರಸ್ತಾವನೆಗಳನ್ನು ಆನ್‌ಲೈನ್ ತಂತ್ರಾಂಶದಲ್ಲಿ ಪ್ರಚಲಿತ ನಿಯಮಗಳಂತೆ ಇತ್ಯರ್ಥಪಡಿಸಿ ಮಂಜೂರಾತಿ ಹಾಗೂ ತಿರಸ್ಕೃತ ಆದೇಶ ಹೊರಡಿಸಲು ಕಡೆಯ ದಿನಾಂಕ | 06-06-2019 |

2019-20 ನೇ ಸಾಲಿಗೆ 1-5ನೇ ತರಗತಿಗಳನ್ನು ಹೊಂದಿರುವ ಶಾಲೆಗಳು 6-8ನೇ ತರಗತಿಗಳಿಗೆ ಉನ್ನತೀಕರಿಸುವ ಸಂಬಂಧ ಅನುಸರಿಸಬೇಕಾದ ವೇಳಾಪಟ್ಟಿ

| ಕ್ರ.ಸಂ. | ವಿಷಯ | ನಿಗಧಿಪಡಿಸಿದ ದಿನಾಂಕ |
|---|---|---|
| 1 | ಕ್ಷೇತ್ರ ಶಿಕ್ಷಣಾಧಿಕಾರಿಗಳು ಜಿಲ್ಲಾ ಉಪನಿರ್ದೇಶಕರಿಗೆ ಪ್ರಸ್ತಾವನೆಯನ್ನು ಆನ್‌ಲೈನ್ ತಂತ್ರಾಂಶದಲ್ಲಿ ಸಲ್ಲಿಸಲು ಕಡೆಯ ದಿನಾಂಕ | 16-5-2019 |
| 2 | ಉಪನಿರ್ದೇಶಕರು 6-8ನೇ ತರಗತಿಗಳನ್ನು ಉನ್ನತೀಕರಿಸುವ ಪ್ರಸ್ತಾವನೆಗಳನ್ನು ಆನ್‌ಲೈನ್ ತಂತ್ರಾಂಶದಲ್ಲಿ ಪ್ರಚಲಿತ ನಿಯಮಗಳಂತೆ ಇತ್ಯರ್ಥಪಡಿಸಿ ಮಂಜೂರಾತಿ ಹಾಗೂ ತಿರಸ್ಕೃತ ಆದೇಶ ಹೊರಡಿಸಲು ಕಡೆಯ ದಿನಾಂಕ | 28-5-2019 |

ತಮ್ಮ ನಂಬುಗೆಯ

[ಡಾ:ಎಂ.ಟಿ.ರೇಜು, ಭಾ.ಆ.ಸೇ]

**ಆಯುಕ್ತರು**

ಪ್ರತಿಗಳನ್ನು:-

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು [ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ], ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು-1 ರವರಿಗೆ,
2. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಕಲ್ಬುರ್ಗಿ.
3. ನಿರ್ದೇಶಕರು, [ಪ್ರಾಥಮಿಕ ಶಿಕ್ಷಣ], ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
4. ನಿರ್ದೇಶಕರು, [ಪ್ರೌಢ ಶಿಕ್ಷಣ], ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
5. ರಾಜ್ಯದ ಎಲ್ಲಾ ಉಪ ನಿರ್ದೇಶಕರುಗಳು, [ಆಡಳಿತ], ಸಾರ್ವಜನಿಕ ಶಿಕ್ಷಣ ಇಲಾಖೆ ರವರುಗಳಿಗೆ ಅಗತ್ಯ ಕ್ರಮಕ್ಕಾಗಿ.
6. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ ರವರುಗಳಿಗೆ ಸೂಕ್ತ ಕ್ರಮಕ್ಕಾಗಿ,
7. ಪುರುಷೋತ್ತಮ್, ಕಾರ್ಯಕ್ರಮಾಧಿಕಾರಿಗಳು, ಸಮಗ್ರ ಶಿಕ್ಷಣ ಅಭಿಯಾನ, ಕೆ.ಆರ್.ವೃತ್ತ ಬೆಂಗಳೂರು. ರವರಿಗೆ ಅಗತ್ಯ ಕ್ರಮಕ್ಕಾಗಿ
8. ಕಛೇರಿ ಪ್ರತಿ.